ಸಧ್ಯದಲ್ಲಿಯೇ ತುಂಬಲಾಗುವುದು ಎಂದು ತಿಳಿಸಿದ್ದಾರೆ. ಬಹುಶಃ ಇದೇ ಅಧಿವೇಶನದಲ್ಲಿ ಮಾನ್ಯ ಸದಸ್ಯರಾದ ಎಸ್. ಎಂ. ನಾಗರಾಜ್‌ರವರು ಹತ್ತನೇ ತಾರೀಖಿನಂದು ಕೇಳಿರುವಂಥ ಪ್ರಶ್ನೆಗೆ ಉತ್ತರಿಸುತ್ತಾ, ಪ್ರೌಢಶಾಲಾ ಶಿಕ್ಷಕರನ್ನು 1996 ನೇ ಇಸವಿಯಲ್ಲಿ ನೇಮಕಾತಿ ಮಾಡಲು ಸರ್ಕಾರ ಅನುಮತಿ ನೀಡಿದ್ದು, ನೇಮಕಾತಿಯು ವಿಭಾಗ ಮಟ್ಟದಲ್ಲಿದ್ದು ಪ್ರಕ್ರಿಯೆ ಪ್ರಾರಂಭವಾಗಿದೆಯೆಂದು, ಆಗಸ್ಟ್ ತಿಂಗಳ ಅಂತ್ಯದೊಳಗೆ ನೇಮಕಾತಿ ಕಾರ್ಯ ಪೂರೈಸಲಾಗುವುದೆಂದು ತಿಳಿಸಿದ್ದಾರೆ. ಆದರೆ, ಈಗ ಆಗಸ್ಟ್ ತಿಂಗಳು ಪ್ರಾರಂಭವಾಗುತ್ತಿರುವಾಗ ಹುದ್ದೆಗಳನ್ನು ಸಧ್ಯದಲ್ಲಿಯೇ ತುಂಬಲಾಗುವುದೆಂದು ಮಾನ್ಯ ಸಚಿವರು ಉತ್ತರಿಸಿರುವುದರಿಂದ ಎಷ್ಟು ದಿವಸಗಳಲ್ಲಿ ಸದರಿ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆಂದು ನಿರ್ದಿಷ್ಟವಾಗಿ ದಯಮಾಡಿ ತಿಳಿಸಬೇಕೆಂದು ಕೇಳಬಯಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೇ, ಪ್ರೌಢಶಾಲೆಗಳಿಗೆ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಸುಮಾರು ಎಂಟು ತಿಂಗಳುಗಳಿಂದಲೂ ಪ್ರಕ್ರಿಯೆ ಸಾಗುತ್ತಿದ್ದು, ನೇಮಕಾತಿಗೆ ಅಭ್ಯರ್ಥಿಯ ವಯಸ್ಸು ಮತ್ತು ಕೆಲವಾರು ಕುಂದು-ಕೊರತೆಗಳಿರುವುದರಿಂದ ಅದನ್ನು ನಿವಾರಿಸಿಕೊಂಡು ಈಗ ಇನ್ನೊಂದು ಹಂತದಲ್ಲಿದ್ದು, ರಾಜ್ಯದ ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರ ಕೊರತೆಯೇನಿದೆ, ಆ ಕೊರತೆಯನ್ನು ನೀಗಿಸಲು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಸಾಗಿದೆ. ಇನ್ನೂ ಒಂದೂವರೆ ತಿಂಗಳಿನಲ್ಲಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ.

ವಿಷಯ :- ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 258 (31)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಆರೋಗ್ಯ ಕೇಂದ್ರಗಳಿಲ್ಲದ ಗ್ರಾಮಗಳು ಇವೆಯೇ? ಹಾಗಿದ್ದಲ್ಲಿ ಕಾರಣಗಳೇನು?

ಇ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? ವಿವರ ನೀಡುವುದು.

ಈ) ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಜನರಿಗೆ ಅನುಕೂಲ ಕಲ್ಪಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ರಾಜ್ಯದಲ್ಲಿ ಒಟ್ಟು 1509 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತವೆ. ಜಿಲ್ಲಾವಾರು ಸಂಖ್ಯಾ ವಿವರ ಕೆಳಗಿನಂತಿದೆ :

ಕ್ರಮ ಸಂಖ್ಯೆ	ಜಿಲ್ಲೆ	ಪ್ರಾ.ಆ.ಕೇಂದ್ರಗಳ ಸಂಖ್ಯೆ
1.	ಬೆಂಗಳೂರು	29
2.	ಬೆಂಗಳೂರು (ಗ್ರಾಮಾಂತರ)	68
3.	ಚಿತ್ರದುರ್ಗ	81
4.	ಕೋಲಾರ	74
5.	ಶಿವಮೊಗ್ಗ	68
6.	ತುಮಕೂರು	89
7.	ಬೆಳಗಾವಿ	122
8.	ಬಿಜಾಪುರ	96
9.	ಧಾರವಾಡ	95
10.	ಉತ್ತರ ಕನ್ನಡ	57
11.	ಬಳ್ಳಾರಿ	60
12.	ಬೀದರ್	40
13.	ಗುಲ್ಬರ್ಗ	94
14.	ರಾಯಚೂರು	76
15.	ಚಿಕ್ಕಮಗಳೂರು	45
16.	ದಕ್ಷಿಣ ಕನ್ನಡ	120
17.	ಕೊಡಗು	29
18.	ಹಾಸನ	72
19.	ಮಂಡ್ಯ	61
20.	ಮೈಸೂರು	133
	ಒಟ್ಟು	1509

ಅ) ಇವೇ.

ಮಾರ್ಗಸೂಚಿಯ ಪ್ರಕಾರ ಬಯಲು ಸೀಮೆಯಲ್ಲಿ ಪ್ರತಿ 30,000 ಜನಸಂಖ್ಯೆಗೆ ಹಾಗೂ ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶಗಳಲ್ಲಿ ಪ್ರತಿ 20,000 ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರುಮಾಡಲಾಗುತ್ತಿದೆ.

ಇ) ವೈದ್ಯರು	1778
ಫಾರ್ಮಾಸಿಸ್ಟ್	1509
ಸ್ಟಾಫ್ ನರ್ಸ್	713
ಕಿರಿಯ ಪ್ರಯೋಗಶಾಲಾ ತಂತ್ರಜ್ಞ	1240
ಹಿರಿಯ ಪುರುಷ ಆರೋಗ್ಯ ಸಹಾಯಕ	269
ಕಿರಿಯ ಪುರುಷ ಆರೋಗ್ಯ ಸಹಾಯಕ	540
ಕ್ಷೇತ್ರ ಆರೋಗ್ಯ ಶಿಕ್ಷಕ	-
ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	713
ಪ್ರಥಮ ದರ್ಜೆ ಸಹಾಯಕರು	1700
ಬೆರಳಚ್ಚುಗಾರ ಹಾಗೂ ಸಹಾಯಕರು	300
ಡಿ ದರ್ಜೆ ನೌಕರರು	2047
ದ್ವಿತೀಯ ದರ್ಜೆ ಸಹಾಯಕರು	109
ಚಾಲಕರು	713
ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	807

ಈ) ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಕೆ. ಜಯರಾಮ ಶೆಟ್ಟಿ :- ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ? ಜಿಲ್ಲಾವಾರು ಮಾಹಿತಿಗಳನ್ನು ಒದಗಿಸಿವುದೆಂದು ಕೇಳಿರುವುದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಒಟ್ಟು 1509 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಜಿಲ್ಲಾವಾರು ಮಾಹಿತಿಗಳನ್ನು ಒದಗಿಸಿದ್ದಾರೆ. ಇದರ ಬಗ್ಗೆ ಸರ್ಕಾರದ ಮುಂದೆ ಇನ್ನು ಎಷ್ಟು ಹೆಚ್ಚುವರಿ ಪ್ರಸ್ತಾವನೆಗಳು ಬಂದಿವೆ? ಇದನ್ನು ನೀವು ಯಾವಾಗ ಅನುಷ್ಠಾನಕ್ಕೆ ತರುತ್ತೀರಿ? ಪ್ರಸ್ತುತ ಇರುವ 1509 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಗಳ ಕೊರತೆ ಏನಾದರೂ ಇದೆಯೇ? ಸಿಬ್ಬಂದಿಗಳ ಕೊರತೆಯಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀರಿನ ಕೊರತೆಯಿಂದ

ಬರುವ ರೋಗಗಳಿಗೆ ತಕ್ಷಣ ಚಿಕಿತ್ಸೆ ನೀಡಿ ವ್ಯವಸ್ಥೆ ಮಾಡಲು ಅನಾನುಕೂಲವಾಗಿರುವ ವಿಚಾರ ನಿಮ್ಮ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದ ಗ್ರಾಮಗಳಿವೆಯೇ? ಹಾಗಿದ್ದಲ್ಲಿ, ಕಾರಣಗಳೇನು? ಎಂದು ಪ್ರಶ್ನಿಸಿರುವುದಕ್ಕೆ ಉತ್ತರಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಮಾನದಂಡದ ಆಧಾರದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುತ್ತದೆ ಎಂಬುದಕ್ಕೆ ಸಚಿವರು ಉತ್ತರ ಕೊಡಬೇಕು.

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಬಯಲುಸೀಮೆಯಲ್ಲಿ ಪ್ರತಿ 30,000 ಜನಸಂಖ್ಯೆಗೆ ಹಾಗೂ ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶಗಳಲ್ಲಿ ಪ್ರತಿ 20,000 ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಬೇಕೆಂದಿದೆ. ಈ ಪ್ರಕಾರ ರಾಜ್ಯದಲ್ಲಿ 1,300 ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಿರಬೇಕಾಗಿತ್ತು. ಆದಕ್ಕಿಂತ ಹೆಚ್ಚಿಗೆ ಅಂದರೆ ಈಗ 1,509 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಇನ್ನೂ ಕೂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಬೇಡಿಕೆಯಿದ್ದು, ಜನ ಪ್ರತಿನಿಧಿಗಳು, ಅನೇಕ ಮುಖಂಡರುಗಳು ಹಾಗೂ ದಾನಿಗಳು ಮುಂದೆ ಬಂದು ಆಸ್ಪತ್ರೆ ನಿರ್ಮಿಸಲು ಅಗತ್ಯವಾದ ಜಾಗ ಒದಗಿಸಿಕೊಡುತ್ತೇವೆ, ಆದುದರಿಂದ, ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ತರಹ ಬಂದಿರುವ ನೂರಾರು ಬೇಡಿಕೆಗಳು ಸರ್ಕಾರದ ಮುಂದಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಈಗಾಗಲೇ ನಾವು ಅಗತ್ಯಕ್ಕಿಂತ ಹೆಚ್ಚಿಗೆ ಆಸ್ಪತ್ರೆಗಳನ್ನು ಹೊಂದಿದ್ದರೂ, ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಕಳೆದ ಹತ್ತು-ಹನ್ನೆರಡು ವರ್ಷಗಳಿಂದ ಯಾವುದೇ ನೇಮಕಾತಿಯಾಗದಿರುವುದರಿಂದ ಇಲಾಖೆಯಲ್ಲಿ ಪ್ರಸ್ತುತ ಸುಮಾರು 48,000 ವಿವಿಧ ದರ್ಜೆಗಳ ನೌಕರರುಗಳಿದ್ದು, ಇನ್ನೂ 10,000 ಹುದ್ದೆಗಳ ಕೊರತೆ ಇದೆ. ಆದರೆ, ಹಣಕಾಸು ಇಲಾಖೆ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಲು ಅನುಮತಿ ಕೊಟ್ಟಿದ್ದು, ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಶುರುವಾಗಿದೆ. ಅಲ್ಲದೇ, ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸುಮಾರು 222 ವೈದ್ಯರ ಹುದ್ದೆಗಳು ಖಾಲಿಯಿದ್ದು, ಈಗಾಗಲೇ ಲೋಕಸೇವಾ ಆಯೋಗದಿಂದ ಹುದ್ದೆಗೆ ಆಯ್ಕೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ತುಂಬಲು ಸುಮಾರು 400 ಹುದ್ದೆಗಳು ಮತ್ತು ಹೆಚ್ಚುವರಿಯಾಗಿ 200 ಹುದ್ದೆಗಳು, ಒಟ್ಟು 600 ಹುದ್ದೆಗಳಿಗೆ ವೈದ್ಯರುಗಳನ್ನು ಆಯ್ಕೆ ಮಾಡಿರುವ ಪಟ್ಟಿಯನ್ನು ಆದಷ್ಟು ಬೇಗ ಕಳುಹಿಸಿಕೊಡುವುದಕ್ಕೆ ಮನವಿ ಮಾಡಿದ್ದೇನೆ. ವೈದ್ಯರ ಹುದ್ದೆಗಳನ್ನು ತುಂಬುವುದರ ಜೊತೆಗೆ ಆಸ್ಪತ್ರೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸ್ಥಳೀಯ ಸಂಸ್ಥೆಗಳು, ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಗೆ ಒಳಪಡುವುದರಿಂದ ಎಲ್ಲೆಲ್ಲಿ ಇಂತಹ ತೊಂದರೆಗಳಿವೆಯೋ ಅದನ್ನು ನಿವಾರಿಸುವ ಸಲುವಾಗಿ ಕೊಳವೆಬಾವಿಗಳನ್ನು ಹಾಕಿಕೊಡುವುದರ ಬಗ್ಗೆ ಈಗಾಗಲೇ ನಾನು ಜಿಲ್ಲಾ ಪರಿಷತ್‌ಗಳಿಗೆ ಸುತ್ತೋಲೆ ಕಳುಹಿಸಿಕೊಟ್ಟಿರುವುದಲ್ಲದೆ, ಆಸ್ಪತ್ರೆಯ ಸುತ್ತಮುತ್ತಲ ಆವರಣವನ್ನು

ಶುಚಿಯಾಗಿಡುವುದಕ್ಕೆ ಸಾಮಾಜಿಕ ಅರಣ್ಯದ ಮುಖಾಂತರ ಗಿಡ-ಮರಗಳನ್ನು ಬೆಳೆಸಲು ಅರಣ್ಯ ಇಲಾಖೆಯವರಿಗೂ ಪತ್ರ ಬರೆದು ಮನವಿ ಮಾಡಿದ್ದೇನೆ.

ಶ್ರೀ ಕೆ. ಜಯರಾಮ ಶೆಟ್ಟಿ :– ಆರೋಗ್ಯ ದಿನಾಚರಣೆ ಆಚರಿಸುತ್ತಿರುವ ಸಂದರ್ಭದಲ್ಲಿ ಕ್ರಿ.ಶ 2000 ಇಸವಿಯೊಳಗೆ ಸರ್ವರಿಗೂ ಆರೋಗ್ಯ ಕೊಡುವ ದೃಷ್ಟಿಯಲ್ಲಿ ತಾವು ಯಾವ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದೀರಿ? ಮತ್ತು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲು ವ್ಯವಸ್ಥೆ ಮಾಡಿದ್ದೀರಿ? ಹಾಗೂ ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಯಾವ ಮಾನದಂಡವನ್ನು ಇಟ್ಟುಕೊಂಡಿದ್ದೀರಿ? ಅಲ್ಲದೇ, ಕುಟುಂಬ ಕಲ್ಯಾಣ ಯೋಜನೆಯಂತೆ ಮಿತ ಸಂತಾನದ ಬಗ್ಗೆ.....

ಅಧ್ಯಕ್ಷರು :– ತಾವು ಕೇಳುತ್ತಿರುವುದು ಬೇರೆ ಪ್ರಶ್ನೆಯಾಗಿರುವುದರಿಂದ ಅದಕ್ಕೆ ಸಿದ್ಧಪಡಿಸಿದ ಉತ್ತರ ಮಂತ್ರಿಗಳ ಹತ್ತಿರ ಎಲ್ಲಿರುತ್ತದೆ? ನೀವು ಏನು ಮೂಲ ಪ್ರಶ್ನೆಗಳನ್ನು ಕೇಳುತ್ತೀರಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಉಪ ಪ್ರಶ್ನೆಗಳನ್ನು ಕೇಳಿದರೆ ಸಚಿವರ ಬಳಿ ಉತ್ತರವಿರುತ್ತದೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದಕ್ಕೆ ಮಂತ್ರಿಗಳೆಂದರೆ ಕಂಪ್ಯೂಟರ್ ಎಂದು ತಿಳಿದಿದ್ದೀರೋ ಹಾಗಾದರೇ, ನಿಮ್ಮನ್ನು ಸ್ವಲ್ಪ ದಿವಸಗಳ ಕಾಲ ಮಂತ್ರಿಯನ್ನಾಗಿ ಮಾಡಿಸುತ್ತೇನೆ, ಆಗ ನಿಮಗೆ ಗೊತ್ತಾಗುತ್ತದೆ.

ಡಾ : ಹೆಚ್. ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೇ, ತಾವು ಹೇಳಿದಂತೆ ಮೂಲ ಪ್ರಶ್ನೆಯನ್ನು ಹೊರತುಪಡಿಸಿ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಅವರಿಗೆ ಉತ್ತರವನ್ನು ನೀಡುತ್ತಿದ್ದೇನೆ. ಅಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಅಲ್ಲಿರುವ ಜನಸಂಖ್ಯೆ ಮತ್ತು ಹೊರರೋಗಿಗಳ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಪ್ರಯತ್ನ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ :– ಮಾನ್ಯ ಅಧ್ಯಕ್ಷರೇ, ಮೂವತ್ತು ಸಾವಿರ ಜನ ಸಂಖ್ಯೆಗೆ ಒಂದು ಆಸ್ಪತ್ರೆಯೆಂದು ತಾವು ಮಾನದಂಡವನ್ನು ವಿಧಿಸಿದ್ದೀರಿ. ಬೆಂಗಳೂರು ನಗರ ಜಿಲ್ಲೆ ಇಡೀ ರಾಜ್ಯದ 28 ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರತಕ್ಕದ್ದಾಗಿದೆ ಇಲ್ಲಿ 48,39,167 ಜನಸಂಖ್ಯೆ ಇದೆ. ಆದರೆ ಇಲ್ಲಿರತಕ್ಕ ಆಸ್ಪತ್ರೆಗಳು ಕೇವಲ 29. ಆದರೆ ಬೆಳಗಾವಿಯಲ್ಲಿ 35,89,600 ಜನಸಂಖ್ಯೆಗೆ 123 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಟ್ಟಿದ್ದೀರಿ. ಎಷ್ಟು ಅಜಗಜಾಂತರ ವ್ಯತ್ಯಾಸವಿದೆ ನೋಡಿ.

ಅಧ್ಯಕ್ಷರು :– ಆನೇಕಲ್‌ನಲ್ಲಿ ಒಂದು ಎಕರೆ ಜಮೀನಿಗೆ 40-50 ಲಕ್ಷ ಕೊಡುತ್ತಾರೆ, ಶ್ರೀನಿವಾಸಪುರದಲ್ಲಿ 35 ಸಾವಿರಕ್ಕೆ ಕೊಡುತ್ತಾರೆ ; ಅದೇ ರೀತಿ ಬೆಳಗಾಂನಲ್ಲಿ ಒಂದು ಎಕರೆಗೆ 65 ಸಾವಿರ ಕೊಟ್ಟರೆ ತಮ್ಮಲ್ಲಿ 65 ಲಕ್ಷ ಬೆಲೆ ಬಾಳುತ್ತದೆ.

ಶ್ರೀ ವೈ. ರಾಮಕೃಷ್ಣ :- ಕೇವಲ 29 ಪ್ರಾಥಮಿಕ ಆರೋಗ್ಯ ಕೇಂದ್ರವೆಲ್ಲಿ 129 ಎಲ್ಲಿ;

ಅಧ್ಯಕ್ಷರು :- ತಾವು ಡೊನೇಷನ್ ಕೊಟ್ಟು ಹಳ್ಳಿಗಳಲ್ಲಿ ಆರೋಗ್ಯ ಕೇಂದ್ರ ಗಳನ್ನು ಸ್ಥಾಪಿಸಬೇಕು. ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರಾರಂಭಿಸಬೇಕು. ನಿಮ್ಮ ಉಪ ಪ್ರಶ್ನೆಗೆ ಜಸ್ಟಿಫಿಕೇಷನ್ ಇಲ್ಲ. You have the richest people.

ಶ್ರೀ ವೈ. ರಾಮಕೃಷ್ಣ :- ಇಲ್ಲಿ ಜನಸಂಖ್ಯೆಯನ್ನು ಮಾನದಂಡವಾಗಿ ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಈ ಆಸ್ಪತ್ರೆಗಳು ರಾಜಕೀಯ ಪ್ರಭಾವದ ಮೇಲೆ ಹಂಚಲ್ಪಟ್ಟಿವೆ. ಜನಸಂಖ್ಯೆಯ ಆಧಾರದ ಮೇಲೆ ಹಂಚಲ್ಪಟ್ಟಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೀರೋ ನೂರು ಆಸ್ಪತ್ರೆಗಳು ವ್ಯತ್ಯಾಸವಿದ್ದರೆ ತಾವೇನು ಹೇಳುತ್ತೀರಿ?

ಡಾ. ಹೆಚ್.ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳ ಸೌಲಭ್ಯವನ್ನು ಬೇರೆ ಜಿಲ್ಲೆಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಅನೇಕ ಆಧುನಿಕವಾದ ಆಸ್ಪತ್ರೆಗಳು ಇಲ್ಲಿವೆ. ಕಿದ್ವಾಯ್, ನಿಮಾನ್ಸ್, ಸಂಜಯ್ ಗಾಂಧಿ, ಬೋರಿಂಗ್, ವಿಕ್ಟೋರಿಯಾ ಇಷ್ಟೆಲ್ಲಾ ಆಧುನಿಕ ಆಸ್ಪತ್ರೆಗಳು ಇಲ್ಲಿವೆ.

ಅಧ್ಯಕ್ಷರು :- ಅದಲ್ಲದೆ ಹಣವಿರುವವರಿಗೆ ಒಕಾರ್ಡೊ, ಮಲ್ಯ ಮುಂತಾದ ಆಸ್ಪತ್ರೆಗಳಿವೆ.

ಶ್ರೀ ವೈ. ರಾಮಕೃಷ್ಣ :- ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಅವಕಾಶ ಮಾಡಿಕೊಡುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ, ನಗರದಲ್ಲಿರುವ ಆಧುನಿಕ ಆಸ್ಪತ್ರೆಗಳಿಗೂ ಏನು ಸಂಬಂಧ? ತುಂಬಾ ಹಣವನ್ನು ಕೊಟ್ಟು ಆಸ್ಪತ್ರೆಗಳಿಗೆ ಹೋಗಲು ಆಗುತ್ತದೆಯೇ? ನಾನು ಹೇಳುತ್ತಿರುವುದು ಗ್ರಾಮೀಣ ಪ್ರದೇಶಗಳ ಬಗ್ಗೆ, ಉದಾಹರಣೆಗೆ ಅನೇಕಲ್ಲು, ಗುಡ್ಡಗಾಡಿನಿಂದ ಕೂಡಿರತಕ್ಕದ್ದು,

ಅಧ್ಯಕ್ಷರು :- ಅನೇಕಲ್ಲಿನವರು ನಡೆಯುವಾಗ ಎಡವಿದರೆ ನೇರವಾಗಿ ಬೆಂಗಳೂರಿಗೆ ಬಂದು ಬೀಳುತ್ತಾರೆ, ಅವರು ಓದಬೇಕಾಗಿಲ್ಲ, ಬೆಂಗಳೂರು ಅನೇಕಲ್‌ಗೆ ಅಷ್ಟೊಂದು ಹತ್ತಿರವಾಗಿದೆ.

ಶ್ರೀ ವೈ. ರಾಮಕೃಷ್ಣ :- ಆದ್ದರಿಂದ ಮುಂದೆ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಾಗ ಜನಸಂಖ್ಯೆಯನ್ನು ಅನುಸರಿಸಿ ಕೊಡುವುದಕ್ಕೆ ಒತ್ತು ಕೊಡುತ್ತೀರಾ? ಆ ರೀತಿ ಮಾಡಿ ವೈಜ್ಞಾನಿಕವಾಗಿ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೀರೋ?

ಡಾ: ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ವಿಶ್ವ ಬ್ಯಾಂಕ್‌ನ ನೆರವಿನ ಅಡಿಯಲ್ಲಿ ಆನೇಕಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ಜಯರಾಮಶೆಟ್ಟಿಯವರು ಮಾತನಾಡುತ್ತಾ ಎರಡು ಸಾವಿರ

ಇಸವಿಯ ವೇಳೆಗೆ ವಿಶ್ವ ಆರೋಗ್ಯ ದಿನಾಚರಣೆಯನ್ನು ಮಾಡುವ ಬಗ್ಗೆ ಹೇಳಿದ್ದಾರೆ. ಅದು ವಿಶ್ವ ಆರೋಗ್ಯ ದಿನಾಚರಣೆಯಲ್ಲ. ಆ ವೇಳೆಗೆ ಎಲ್ಲರಿಗೂ ಆರೋಗ್ಯವನ್ನು ಕೊಡಬೇಕು ಎನ್ನತಕ್ಕ ರೆಸಲ್ಯೂಷನ್ ಆಗಿದೆ. ಆದರೆ ನಮ್ಮ ದೇಶದ ಸಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ನೋಡಿದಾಗ ನಮ್ಮಲ್ಲಿ ಬಡವರು, ಅವಿದ್ಯಾವಂತರು, ಕೊಳಚೆ ಪ್ರದೇಶಗಳಲ್ಲಿ ವಾಸಮಾಡತಕ್ಕ ಜನರಿರುವಾಗ ಎಲ್ಲರಿಗೂ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದಿರತಕ್ಕ ಸಂದರ್ಭದಲ್ಲಿ ಎರಡು ಸಾವಿರ ಇಸವಿಯ ವೇಳೆಗೆ ಎಲ್ಲರಿಗೂ ಆರೋಗ್ಯವನ್ನು ಒದಗಿಸುವ ಬಗ್ಗೆ ಪ್ರಯತ್ನ ಮಾಡಿದರೂ ಶುದ್ಧವಾದ ಕುಡಿಯುವ ನೀರು, ವಾಸಕ್ಕೆ ಬೇಕಾದಂಥ ಮನೆಗಳು, ಸಾರ್ವಜನಿಕ ಸಂಪರ್ಕ ರಸ್ತೆಗಳನ್ನು ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಪ್ರಥಮ ಬಾರಿಗೆ ಪ್ರಧಾನಮಂತ್ರಿಯವರು ಕನಿಷ್ಟ ಅವಶ್ಯಕತೆಗಳು ಎನ್ನತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ಪ್ರಾಥಮಿಕ ಆರೋಗ್ಯವೂ ಒಂದಾಗಿದೆ.

ಶ್ರೀ ವೈ. ರಾಮಕೃಷ್ಣ :- ಅಧ್ಯಕ್ಷರೆ, 1500 ಕೊಳಚೆ ಪ್ರದೇಶಗಳೆಂದೇನು ಗುರುತಿಸಿದ್ದೇವೆ ಅಲ್ಲಿ ಯಾವುದಾದರೊಂದು ಕಡೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆಗೆದಿದ್ದೀರೋ ತೆಗೆದಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ :- ಐ.ಪಿ.ಪಿ. ಎಂಟರ ಅಡಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ವಿಶೇಷವಾಗಿ ಆರೋಗ್ಯ ಕಾರ್ಯಕ್ರಮವನ್ನು ಒದಗಿಸಬೇಕೆಂದು ಸುಮಾರು ನಲವತ್ತು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಈಗಾಗಲೇ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಬಿ. ಆರ್. ಯಾವಗಲ್ :- ಮಾನ್ಯ ಅಧ್ಯಕ್ಷರೆ, ಜನಸಂಖ್ಯೆಯನ್ನು ಆಧರಿಸಿ ಆಸ್ಪತ್ರೆಯನ್ನು ತೆರೆಯುವುದಾಗಿ ಹೇಳಿದ್ದಾರೆ. ಆ ರೀತಿ ಮೈಸೂರನ್ನು ಗಮನಿಸಿದರೆ ಅಲ್ಲಿ 133 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಅದನ್ನು ಬೇರೆ ಭಾಗದೊಂದಿಗೆ ಹೋಲಿಕೆ ಮಾಡಿದರೆ ಬೇರೆ ಕಡೆಗಳಲ್ಲಿ ಕಡಿಮೆಯಾಯಿತು ಎಂದು ಕಂಡುಬರುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಅಧ್ಯಕ್ಷರು :- ಮೈಸೂರಿನಲ್ಲಿ ಮಹಾರಾಜರು ಮೊದಲು ಆಸ್ಪತ್ರೆಗಳನ್ನು ತೆರೆದಿದ್ದಿರಬೇಕು;

ಶ್ರೀ ಬಿ. ಆರ್. ಯಾವಗಲ್ :- ಅಧ್ಯಕ್ಷರೆ, ಆದೇ ರೀತಿ ಎಲ್ಲಾ ಕಡೆ ಕೊಡುವ ಪ್ರಯತ್ನವನ್ನು ಮಾಡುತ್ತಾರೆಯೇ? ಹಿಂದೆ ಜಿಲ್ಲಾಪರಿಷತ್‌ಗಳು ಗ್ರಾಮೀಣ ಆರೋಗ್ಯ ಘಟಕಗಳನ್ನು ಎಲ್ಲಾಕಡೆ ಸಣ್ಣ ಪ್ರಮಾಣದಲ್ಲಿ ಪ್ರಾರಂಭ ಮಾಡಿದ್ದರು. ಅವುಗಳನ್ನು ಖಾಯಂಗೊಳಿಸಿ ಮೇಲ್ದರ್ಜೆಗೆ ಏರಿಸಲು ಪ್ರಯತ್ನ ಮಾಡುತ್ತೀರಾ?

ಡಾ: ಹೆಚ್. ಸಿ. ಮಹದೇವಪ್ಪ :- ಅಧ್ಯಕ್ಷರೆ, 1987 ರಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳ ಸ್ಥಾಪನೆ ಮಾಡುವುದನ್ನು ನಿಲ್ಲಿಸಲಾಗಿದೆ. ಕಾಲಕ್ರಮೇಣ ಅವುಗಳು

ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಪರಿವರ್ತನೆ ಮಾಡಲು ಸರ್ಕಾರ ಆಲೋಚನೆ ಮಾಡುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಉತ್ತರಕನ್ನಡಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಿದೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯರ ಸಂಖ್ಯೆ 1778 ಎಂದು ತಿಳಿಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೇಮಕವಾಗಿರುವ ವೈದ್ಯರಿಗೆ ಮೂಲಭೂತ ಸೌಲಭ್ಯಗಳಿಲ್ಲದೆ ಹಲವಾರು ಮಂದಿ ಗ್ರಾಮಾಂತರ ಪ್ರದೇಶಕ್ಕೆ ಹೋಗುತ್ತಿಲ್ಲ. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ಅಂಥ ವೈದ್ಯರುಗಳು ಎಷ್ಟು ಜನರಿದ್ದಾರೆ? ಈ ರೀತಿ ಹುದ್ದೆಗಳು ಖಾಲಿ ಇರುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ಐ.ಪಿ.ಪಿ. 9 ರ ಅಡಿಯಲ್ಲಿ ವೈದ್ಯರ ಕೊಠಡಿ, ಆಸ್ಪತ್ರೆಯ ಕಟ್ಟಡ, ಸಬ್‌ಸೆಂಟರ್‌ನ ಕಟ್ಟಡ ಮುಂತಾಗಿ ಕಟ್ಟಡಕೋಸ್ಕರವೇ 115-120 ಕೋಟಿ ರೂಪಾಯಿಗಳ ಯೋಜನೆ ಇದೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಈ ಸದನ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ :- ಅಧ್ಯಕ್ಷರೇ, ತಾವು ಗ್ರಾಮಾಂತರ ಪ್ರದೇಶಗಳಲ್ಲಿ ಬಾಣಂತಿ ಕೇಂದ್ರಗಳನ್ನು ತೆರೆಯುತ್ತೀರಿ. ಕುಟುಂಬ ಯೋಜನೆಯ ಅಡಿಯಲ್ಲಿ ಮಿತ ಸಂತಾನ ಮಾಡುವ ಕುಟುಂಬಗಳಿಗೆ ಮಾಶಾಸನವನ್ನು ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳತ್ತೀರೋ ಕುಟುಂಬ ಯೋಜನ ವ್ಯವಸ್ಥೆಯನ್ನು ತಾಯಿ ಮತ್ತು ತಂದೆ ಇಬ್ಬರಿಗೂ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರೋ?

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಬಾಣಂತಿ ಕೇಂದ್ರವನ್ನು ಸುಮಾರು ಆಸ್ಪತ್ರೆಗಳಲ್ಲಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಇದು ಕೇಂದ್ರ ಸರ್ಕಾರದ ಯೋಜನೆ. ಕುಟುಂಬ ಕಲ್ಯಾಣಕ್ಕೆ ಒಳಪಡತಕ್ಕ ಕುಟುಂಬಗಳಿಗೆ ತಂದೆ ಮತ್ತು ತಾಯಿ ಗಳಿಬ್ಬರಿಗೂ ಮಾಶಾಸನ ಕೊಡಬೇಕೆಂಬುದು ತಮ್ಮ ಪ್ರಶ್ನೆಯಲ್ಲವೇ? ಕುಟುಂಬ ಕಲ್ಯಾಣ ದಲ್ಲಿ ಹೆಚ್ಚಾಗಿ ಮಹಿಳೆಯರು ಒಳಗಾಗುತ್ತಿದ್ದಾರೆ. ಗಂಡಸರೂ ಇದರಲ್ಲಿ ಹೆಚ್ಚಾಗಿ ಒಳಗಾಗಬೇಕು ಎನ್ನತಕ್ಕ ಉದ್ದೇಶದಿಂದ ಹೊಸ ವಿಧಾನವನ್ನು ಜಾರಿಗೆ ತಂದಿದ್ದೇವೆ. ಅದನ್ನು ಅಳವಡಿಸಿಕೊಂಡು ವಿಶೇಷವಾದ ಯೋಜನೆಯನ್ನು ಸಹ ತಯಾರು ಮಾಡಿದ್ದೇವೆ.

ವಿಷಯ :- ಧಾರವಾಡ ಜಿಲ್ಲಾ ಶಸ್ತ್ರ ಚಿಕಿತ್ಸಾ ದವಾಖಾನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 259 (1736)

ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?